

# ಕಳೆದ ದಿನಗಳ ನೆನಪುಗಳು

(ಸ್ವಾಮಿ ವಿರಜಾನಂದರ ಜೀವನ ಹಾಗೂ ಕೆಲವು ಸಮಕಾಲೀನ ಘಟನೆಗಳು)

ಮೂಲ ಬಂಗಾಳಿ: **ಸ್ವಾಮಿ ಶ್ರದ್ಧಾನಂದ** ಅನುವಾದ: **ಪ್ರವ್ರಾಜಿಕಾ ಯೋಗಾತ್ಮಪ್ರಾಣಾ**

## ಭಾಗ ೪೦

ಪಾಟ್ನಾದಿಂದಲೂ ಸಹ ಮಹಾರಾಜರಿಗೆ ಆಹ್ವಾನವಿತ್ತು. ಹೀಗಾಗಿ ಅಲ್ಲಿಯೂ ಮೂರು ದಿನ ಉಳಿದುಕೊಂಡರು. ಈ ಬಾರಿ ಅನೇಕ ಭಕ್ತರು ನೆರೆದಿದ್ದರು. ಒಂದು ಸಂಜೆ ಭಕ್ತರೊಡನೆ ಬಹಳ ಹೊತ್ತು ಆಧ್ಯಾತ್ಮಿಕ ವಿಷಯಗಳನ್ನು ಮಾತನಾಡಿದರು. ಬಹಳಷ್ಟು ಭಕ್ತರಿಗೆ ದೀಕ್ಷೆಯನ್ನಿತ್ತರು. ಡಿಸೆಂಬರ್ ೧೦ರಂದು ಬೇಲೂರು ಮಠಕ್ಕೆ ಹಿಂತಿರುಗಿದರು. ಅದು ಶ್ರೀಮಾತೆಯವರ ಜನ್ಮೋತ್ಸವದ ಹಿಂದಿನ ದಿನವಾಗಿತ್ತು.

ಕೆಲವು ದಿನಗಳ ನಂತರ ಸ್ವಾಮಿ ಸಹಜಾನಂದರು (ನಗೇನ್ ಮಹಾರಾಜ್) ಕಾಶಿಯ ಸೇವಾಶ್ರಮದಲ್ಲಿ ತಮ್ಮ ೫೬ನೇ ವಯಸ್ಸಿನಲ್ಲಿ ದೇಹತ್ಯಾಗ ಮಾಡಿದ ದುಃಖದ ವಾರ್ತೆಯು ಬಂದಿತು. ಇವರು ೧೯೧೨ರಲ್ಲಿ ಮಠವನ್ನು ಸೇರಿದ್ದರು. ಇದಕ್ಕೂ ಹಿಂದೆ ಅವರು ಸ್ವದೇಶಿ ಚಳುವಳಿಯಲ್ಲಿ ಪಾಲ್ಗೊಂಡಿದ್ದ ಒಬ್ಬ ಉತ್ಸಾಹೀ ಹೋರಾಟಗಾರರು. ಕಳೆದ ಹತ್ತು ವರ್ಷಗಳಿಂದ ಅವರು ವೃಂದಾವನದ ಸೇವಾಶ್ರಮದಲ್ಲಿ ಅಧ್ಯಕ್ಷರಾಗಿ ತುಂಬ ದಕ್ಷತೆಯಿಂದ ಕಾರ್ಯ ನಿರ್ವಹಿಸುತ್ತಿದ್ದರು. ವಿರಜಾನಂದರು ಬೃಂದಾವನಕ್ಕೆ ಹೋದಾಗಲೆಲ್ಲ ಅವರ ಮುಗ್ಧ, ನಿಷ್ಕಲ್ಮಷ ಸೇವೆಯಿಂದಾಗಿ ಸಂತುಷ್ಟರಾಗುತ್ತಿದ್ದರು.

### ೨೧

ಯುದ್ಧದ ಕಾರ್ಮೋಡಗಳು ದಟ್ಟೈಸುತ್ತಲಿವೆ, ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಹರಡುತ್ತಿದೆ. ಜನರ ಮನದಲ್ಲಿ ಉದ್ವೇಗ, ಆತಂಕ, ಅನಿಶ್ಚಿತತೆ ಕ್ರಮೇಣ ಹೆಚ್ಚುತ್ತಲಿದೆ. ದೈನಂದಿನ ಜೀವನದಲ್ಲಿ ದುಃಖ ಸಂಕಷ್ಟಗಳು ಜಟಿಲರೂಪ ತಾಳುತ್ತಿವೆ. ಯಾವ ದಿಸೆಯಲ್ಲೂ ಆಶಾಕಿರಣವು ಕಂಡು ಬರುತ್ತಿಲ್ಲ.

೧೯೪೨ರಲ್ಲಿ ಕೊಲ್ಕತ್ತೆಯ ಬೃಹತ್ ಶಿಕ್ಷಣ ಸಂಸ್ಥೆಗಳಲ್ಲಿ ಒಂದಾದ ವಿದ್ಯಾರ್ಥಿ ಆಶ್ರಮವನ್ನು ದಮ್‌ದಮ್‌ನ ಗೌರೀಪುರದ ತನ್ನ ಸ್ವಂತ ನೆಲೆಯಿಂದ ಟಾಕಿಯ ಹತ್ತಿರದ ಹಸಾನಾಬಾದ್ ಎಂಬ ಗ್ರಾಮದ ಬಾಡಿಗೆಯ ಕಟ್ಟಡವೊಂದಕ್ಕೆ ಸ್ಥಳಾಂತರಿಸಬೇಕಾಗಿ ಬಂತು. ಏಕೆಂದರೆ ಯುದ್ಧದ ಒತ್ತಡಕ್ಕೆ ಕಟ್ಟುಬಿದ್ದ ಬ್ರಿಟಿಷ್ ಸರ್ಕಾರವು ವಿಮಾನ ನಿಲ್ದಾಣದ ವಿಸ್ತರಣೆಗಾಗಿ ವಿದ್ಯಾರ್ಥಿ ಆಶ್ರಮದ ನೆಲೆಯನ್ನು ತನ್ನ ವಶಕ್ಕೆ ತೆಗೆದುಕೊಂಡಿತು (ಸ್ಥಳವು ವಿಮಾನ ನಿಲ್ದಾಣಕ್ಕೆ ಹತ್ತಿರವಿತ್ತು). ಈ ಆಶ್ರಮವನ್ನು ಸ್ವಾಮಿ ನಿರ್ವೇದಾನಂದರು (ಅನಾದಿ ಮಹಾರಾಜ್) ಮತ್ತು ಅವರ ಸಂಗಡಿಗರು ತಮ್ಮ ಬಹುವರ್ಷಗಳ ನಿರಂತರ ದಣಿವರಿಯದ ಪ್ರಯತ್ನದಿಂದ ಅತ್ಯಂತ ಸುಂದರವಾಗಿ ಪರಿವರ್ತಿಸಿದ್ದರು. ಆಶ್ರಮದಲ್ಲಿ ದೇವಮಂದಿರ, ವಿದ್ಯಾರ್ಥಿ ಮಂದಿರ, ಪುಷ್ಕರಣಿ, ಹೂವು-ಹಣ್ಣಿನ ತೋಟ ಮುಂತಾದವು ರೂಪುಗೊಂಡು ಭವಿಷ್ಯದ ಅಭಿವೃದ್ಧಿಯನ್ನು ತೋರುತ್ತಿತ್ತು. ಇಂತಹ ಸ್ಥಳವು ಅನಿರೀಕ್ಷಿತವಾಗಿ ಕೈಬಿಟ್ಟು ಹೋದದ್ದಕ್ಕೆ ಮಠದ ಆಡಳಿತವರ್ಗವು ಬಹಳವಾಗಿ ನೊಂದಿತು. ಮಠಾಧ್ಯಕ್ಷರಾದ ವಿರಜಾನಂದರ ಮನಸ್ಸಿಗೂ ಇದರಿಂದ ತುಂಬ ವ್ಯಥೆಯಾಯಿತು. ಈ ಸಂಸ್ಥೆಯನ್ನು ಮಹಾರಾಜರು ತುಂಬ ಮೆಚ್ಚಿದ್ದರು. ಅಲ್ಲದೆ ಕಾಲೇಜಿನ ಸ್ಥಾಪಕರಾದ ನಿರ್ವೇದಾನಂದರು ಅಲ್ಲಿ ವ್ಯಾಸಂಗ ಮಾಡುತ್ತಿದ್ದ ತರುಣರನ್ನು ಸ್ವಾಮಿ ವಿವೇಕಾನಂದರ ಆದರ್ಶದಂತೆ ರೂಪುಗೊಳಿಸುವ ರೀತಿಯನ್ನು ಅವರು ತುಂಬ ಪ್ರಶಂಸಿಸುತ್ತಿದ್ದರು. ಈ ಸಂಸ್ಥೆಯು ಸಂಘಕ್ಕೆ ಅನೇಕ ಸಂನ್ಯಾಸಿಗಳನ್ನು ನೀಡಿತ್ತು.

ಈ ಬಾರಿ ಶ್ರೀರಾಮಕೃಷ್ಣ ಜಯಂತಿಯು ಫೆಬ್ರವರಿ ೧೭ರಂದು ಬಂದಿತ್ತು. ವಿರಜಾನಂದರು ಉತ್ಸವವಾದ ಕೆಲವು ದಿನಗಳಲ್ಲಿಯೇ ಬಾಂಕುರಕ್ಕೆ ಹೊರಟರು. ಎರಡು ವರ್ಷಗಳ ಹಿಂದೆಯೇ ಇಲ್ಲಿಗೆ ಹೊರಟಿದ್ದರೂ ಸಹ ಅದು ಕಾರ್ಯಗತವಾಗಿರಲಿಲ್ಲ. ಈ ಬಾರಿ ತಮ್ಮ ಮಾತನ್ನು ಉಳಿಸಿಕೊಂಡಂತಾಯಿತು. ಮಹಾರಾಜರು ಇಲ್ಲಿ ಒಂದು ವಾರವಿದ್ದರು. ದೂರ ದೂರದ ಗ್ರಾಮದಿಂದ ಬಂದ ಸ್ತ್ರೀಪುರುಷರು ಮಹಾರಾಜರ ಸಂಗವನ್ನೂ, ಆಶೀರ್ವಾದವನ್ನೂ ಪಡೆಯಲು ಸಾಧ್ಯವಾಯಿತು. ಅಲ್ಲಿ ಶ್ರೀರಾಮಕೃಷ್ಣ ಮಂದಿರಕ್ಕೆ ಶಂಕುಸ್ಥಾಪನೆಯನ್ನೂ ಸಹ ಮಹಾರಾಜರು ನೆರವೇರಿಸಿದರು. ಬಾಂಕುರಾದಿಂದ ಹೊರಟು ಆಸಾನ್‌ಸೋಲ್ ಆಶ್ರಮದಲ್ಲಿ ಒಂದು ದಿನದ ಮಟ್ಟಿಗೆ ಇಳಿದುಕೊಂಡರು. ಕಾಶಿ, ಡೆಹರಾಡೂನ್ ಮೂಲಕ ಪ್ರಯಾಣಿಸಿ ಶ್ಯಾಮಲಾತಾಲ್‌ಗೆ ತಲುಪಿದರು. ಸ್ವಲ್ಪ ಹೊತ್ತಿನಲ್ಲಿಯೇ ತಿಳಿದು ಬಂದ ಸುದ್ದಿಯೇನೆಂದರೆ 'ಜಪಾನೀಯರು ರಂಗೂನಿನ ಮೇಲೆ ಆಕ್ರಮಣ ನಡೆಸಿದ್ದಾರೆ, ಅಲ್ಲಿಯ 'ಶ್ರೀರಾಮಕೃಷ್ಣ ಮಿಷನ್ ಸೇವಾಶ್ರಮ' ಮತ್ತು 'ಶ್ರೀರಾಮಕೃಷ್ಣ ಸೊಸೈಟಿ'ಗಳೆಂಬ ಎರಡೂ ಕೇಂದ್ರಗಳನ್ನು ಮುಚ್ಚಿ, ಅಲ್ಲಿಯ ಸದಸ್ಯರೆಲ್ಲ ಬಹು ಗಂಡಾಂತರಗಳನ್ನು ಎದುರಿಸಿ ಭಾರತಕ್ಕೆ ಹಿಂತಿರುಗಿದ್ದಾರೆ ಎಂದು. ಇದರ ನಂತರವೇ ಭಾರತವ್ಯಾಪೀ ಆಗಸ್ಟ್ ಆಂದೋಲನದ ಸುದ್ದಿಯನ್ನೂ ಸಹ ತಿಳಿದರು.

ಸ್ವಾಮಿ ವಿವೇಕಾನಂದರ ಗೃಹಸ್ಥ ಶಿಷ್ಯರೂ, 'ಸಂವಾದ-ತರಂಗಿಣಿ'[೧] ಎಂಬ ಹೆಸರಿನ ಪುಸ್ತಕದ ಲೇಖಕರೂ ಆದ ಶರಚ್ಚಂದ್ರ ಚಕ್ರವರ್ತಿಗಳು ಅನಾರೋಗ್ಯ ನಿಮಿತ್ತ ಕೆಲವು ದಿನಗಳಿಂದ ಫರೀದ್‌ಪುರ ಜಿಲ್ಲೆಯ ತಮ್ಮ ಸ್ವಗ್ರಾಮದಲ್ಲಿ ವಾಸಿಸುತ್ತಿದ್ದರು. ಅಲ್ಲಿಂದ ಅವರು ಮಹಾರಾಜರಿಗೆ ಪತ್ರವೊಂದನ್ನು ಬರೆದು, 'ಭಾಯೀ, ಚರಮಾವಸ್ಥೆಗೆ ಹೋಗಿರುವ ಈ ದೇಹದ ಯಾತನೆಯನ್ನು ಸಹಿಸಲು ನಿನ್ನ ಶುಭಾಶೀರ್ವಾದಗಳು ಬೇಕು' ಎಂದು ಪ್ರಾರ್ಥಿಸಿದ್ದರು. ವಿರಜಾನಂದರು ತಕ್ಷಣವೇ ತಮ್ಮ ಗುರುಭಾಯಿಯೂ, ಮಿತ್ರರೂ ಆದ ಶರಚ್ಚಂದ್ರರಿಗೆ ಸಹಾನುಭೂತಿ ತೋರಿ ಉತ್ಸಾಹವನ್ನು ನೀಡುವ ಪತ್ರ ಬರೆದರು. ಅದರ ಕೊನೆಯ ಸಾಲಿನಲ್ಲಿ, ''ಪ್ರತಿಯೊಂದು ಉಸಿರಿಗೂ ಹೇಳು, 'ಜೈ ರಾಮಕೃಷ್ಣರಿಗೆ ಜೈ, ಜೈ ಸ್ವಾಮೀಜಿಗೆ ಜೈ' ಎಂದು. ನಿನಗೆ ಇನ್ನಾವುದರ ಭಯ? ಇನ್ಯಾವುದರ ಚಿಂತೆ? ನೀನೊಬ್ಬ ವೇದಾಂತಿ. ನಿನಗೆ ರೋಗವೆಂದರೇನು? ಶರೀರವೆಂದರೇನು? ನೀನು ಅಖಂಡ, ಸಚ್ಚಿದಾನಂದ, ಪೂರ್ಣ ಬ್ರಹ್ಮ ಪರಮಾತ್ಮ! ವಾಹ್! ಗುರೂ ಕೀ ಫತೇ!'' ಎಂದು ಬರೆದಿದ್ದರು. ಆದರೆ ದುಃಖದ ವಿಷಯವೇನೆಂದರೆ ಪತ್ರವು ತಲುಪುವುದರ ಮೊದಲೇ ಶರಚ್ಚಂದ್ರರ ದೇಹತ್ಯಾಗವಾಗಿತ್ತು. ವಿವೇಕಾನಂದರ ಅತ್ಯಂತ ಪ್ರೀತಿಪಾತ್ರರಾದ ಈ ಶ್ರೇಷ್ಠ ಭಕ್ತನನ್ನು ಕಳೆದುಕೊಂಡು ವಿರಜಾನಂದರು ತುಂಬ ದುಃಖಿತರಾದರು.

ದುರ್ಗಾಪೂಜೆಯ ನಂತರ ಮಹಾರಾಜರಿಗೆ, ಮೇದಿನೀಪುರ, ೨೪ ಪರಗಣ ಮತ್ತು ಒರಿಸ್ಸಾಗಳಲ್ಲಿ ಚಂಡಮಾರುತದಿಂದಾದ ಹಾವಳಿಯ ಭಯಾನಕ ಸುದ್ದಿಯು ತಲುಪಿತು. ದುರ್ಗಾಸಪ್ತಮಿಯಂದು ಹಠಾತ್ತಾಗಿ ಬೀಸಿದ ಚಂಡಮಾರುತದಿಂದ ಸಮುದ್ರದ ನೀರು ತೀರವನ್ನು ಅತಿಕ್ರಮಿಸಿ ೧೪-೧೫ ಮೈಲಿಗಳಷ್ಟು ದೂರ ಜನವಾಸದ ಸ್ಥಳಕ್ಕೆ ನುಗ್ಗಿ ಪ್ರಚಂಡ ವೇಗದಿಂದ ಎಲ್ಲವನ್ನೂ ಮುಳುಗಿಸುತ್ತಿತ್ತು. ಪ್ರವಾಹದ ಈ ನೀರು ೬-೭ ಅಡಿಗಳಷ್ಟು ನಿಂತಿತ್ತು. ಕೆಲವೆಡೆ ೧೧ ರಿಂದ ೧೬ ಅಡಿಗಳವರೆಗೂ ಇತ್ತು. ಈ ಪ್ರವಾಹದಲ್ಲಿ ಅಸಂಖ್ಯಾತ ಮಾನವರೂ, ದನಕರುಗಳೂ, ಮನೆಗಳೂ, ಮರಗಿಡಗಳೂ ಕೊಚ್ಚಿ ಹೋದವು. ಚಂಡಮಾರುತದ ವೇಗವು ಗಂಟೆಗೆ ೧೪೦ ಮೈಲಿಯಷ್ಟಿತ್ತು. ಅಷ್ಟೇ ಅಲ್ಲದೆ, ಮುಸಲಧಾರೆ ಮಳೆಯೂ ಬೀಳುತ್ತಿತ್ತು. ಕೆಲವೆಡೆ ಇದು ೧೨ ಇಂಚಿನಷ್ಟು ಇತ್ತು (೨೪ ಗಂಟೆಗಳಲ್ಲಿ). ಹಿಂದೆಂದೂ ಕಾಣದ ಈ ದುರಂತದಲ್ಲಿ ಬಹಳಷ್ಟು ಪ್ರಾಣ ಹಾನಿಯಾಗಿತ್ತು. ತಾಮಲೂಕ್ ಮತ್ತು ಕಾಂಥಿ ಮಹಕುಮಾರ್ ಪ್ರದೇಶದ ಡೈಮಂಡ್ ಹಾರ್ಬರ್, ಮಹಕುಮಾರ್ ಸಾಗರದ್ವೀಪ ಹಾಗೂ ಬಾಲೇಶ್ವರ ಜಿಲ್ಲೆಯ ಕೆಲವು ಭಾಗಗಳು ಅತಿಹೆಚ್ಚಿನ ಪ್ರಮಾಣದ ಹಾನಿಗೆ ಒಳಗಾಗಿದ್ದವು. ಆಗಸ್ಟ್ ಆಂದೋಲನದಲ್ಲಿ ಮೇದಿನೀಪುರವು ವಿಶೇಷ ಪಾತ್ರವನ್ನು ವಹಿಸಿತ್ತು ಎಂಬ ಕಾರಣಕ್ಕಾಗಿ ಇಂಗ್ಲಿಷ್ ಸರ್ಕಾರವು ಈ ಪರಿಸ್ಥಿತಿಯನ್ನು ತನ್ನ ಪ್ರತೀಕಾರಕ್ಕಾಗಿ ಉಪಯೋಗಿಸಿಕೊಂಡಿತ್ತು. ಈ ಭೀಕರ ಚಂಡಮಾರುತದ ಸುದ್ದಿಯನ್ನು ಕೆಲವು ದಿನ ಮುಚ್ಚಿಟ್ಟಿತ್ತು. ನಮ್ಮ ದೇಶದ ಜನರಿಂದಲೂ ಸಹ ಪೀಡಿತರಿಗೆ ಯಾವುದೇ ನೆರವು ಸಿಕ್ಕುವಂತಾಗಬಾರದು ಎಂಬುದೇ ಅವರ ಉದ್ದೇಶವಾಗಿತ್ತು. ಪರಿಸ್ಥಿತಿ ಇಷ್ಟು ನಿಷ್ಠುರವಾಗಿದ್ದರೂ ಅದನ್ನು ಉಪೇಕ್ಷಿಸಿ ರಾಮಕೃಷ್ಣ ಮಿಷನ್ ಪ್ರವಾಹ ಪೀಡಿತರಿಗೆ ಅತಿ ಶೀಘ್ರವಾಗಿ ವ್ಯಾಪಕವಾದ ಪರಿಹಾರವನ್ನು ಒದಗಿಸಿತು. ಕೊನೆಗೆ ಸರ್ಕಾರವೂ ಈ ಕೆಲಸದಲ್ಲಿ ತನ್ನ ಸಹಾಯವನ್ನು ನೀಡಲು ಕಟ್ಟುಬಿತ್ತು. ಮಿಷನ್ ತನ್ನ ಈ ಸೇವಾಕಾರ್ಯವನ್ನು ಒಂದೂವರೆ ವರ್ಷಕ್ಕಿಂತಲೂ ಹೆಚ್ಚು ಕಾಲ ನಡೆಸಬೇಕಾಯಿತು.

೧೯೪೨ರ ಡಿಸೆಂಬರಿನಲ್ಲಿ ವಿರಜಾನಂದರು ಮಠ ತಲುಪುತ್ತಿದ್ದಂತೆಯೇ ಕೊಲ್ಕತ್ತೆಯ ಮೇಲೆ ಜಪಾನೀಯರ ಬಾಂಬಿನ ದಾಳಿ ಆರಂಭವಾಯಿತು. ಮಂದಿರದ ಕೆಳಗಿರುವ ನೆಲಮಾಳಿಗೆಯನ್ನು ಮಠವು ವಿಮಾನ ಆಕ್ರಮಣವಾದಾಗ ಆಶ್ರಯ ಪಡೆಯಲು (Air-raid shelter) ಉಪಯೋಗಿಸುತ್ತಿದ್ದರು. ಎಚ್ಚರಿಕೆಯ ಸೀಟಿಯನ್ನು ಕೇಳಿದಾಕ್ಷಣ ವಿರಜಾನಂದರೂ ಸಹ ಕೆಳಗಿಳಿದು ಬಂದು ನೆಲಮಾಳಿಗೆಯಲ್ಲಿ ಆಶ್ರಯ ಪಡೆಯಬೇಕಿತ್ತು.

೧೯೪೩ನೇ ವರ್ಷ. ದೇಶದ ಜಟಿಲವಾದ ರಾಜಕೀಯ ಪರಿಸ್ಥಿತಿಯಲ್ಲಿಯೂ ಸಹ ಜನಸಾಮಾನ್ಯರ ಆಧ್ಯಾತ್ಮಿಕ ಪಿಪಾಸೆಯು ಕಡಿಮೆಯೇನೂ ಆಗಿರಲಿಲ್ಲ. ಯುದ್ಧದ ಕಠೋರತೆ, ಸಾಮ್ರಾಜ್ಯಶಾಹಿಗಳ ಯಾವುದಕ್ಕೂ ಹೇಸದ ಬರ್ಬರತೆಯು ಎಷ್ಟು ಭಯಂಕರ ರೂಪವನ್ನು ತಾಳುತ್ತಿತ್ತೋ! ಚಿಂತನಶೀಲ ವ್ಯಕ್ತಿಗಳು ತಮ್ಮ ಹೃದಯಾಂತರಾಳದಿಂದ ಅರಿಯುತ್ತಿದ್ದುದೇನೆಂದರೆ 'ಕಲ್ಯಾಣದ ಪಥವು ಬೇರೆಯೇ; ಶಾಂತಿಯನ್ನು ಪಡೆಯುವ ಉಪಾಯವು ಹೊರಗಡೆಯಿಲ್ಲ, ಆಂತರ್ಯದಲ್ಲೇ ಇದೆ' ಎಂದು. ಬೇಲೂರು ಮಠದಲ್ಲಿ ಧರ್ಮಪಿಪಾಸುಗಳ ಸಮಾಗಮವು ಆಗುತ್ತಲೇ ಇತ್ತು. ವಿರಜಾನಂದರು ಅಸ್ವಸ್ಥರಾಗಿದ್ದರೂ ಸಹ ಭಕ್ತರ ಆಕಾಂಕ್ಷೆಗಳನ್ನು ತಮಗಾದ ಮಟ್ಟಿಗೆ ಪೂರೈಸುತ್ತಲೇ ಇದ್ದರು.

ಈ ಬಾರಿ ಸ್ವಾಮೀಜಿಯವರ ಜಯಂತಿಯಂದು ರಾತ್ರಿ ಸಂನ್ಯಾಸ-ಬ್ರಹ್ಮಚರ್ಯ ದೀಕ್ಷೆ ನೀಡುವ ಆಯೋಜನೆಯಾಗಿತ್ತು. ಏಕೆಂದರೆ ಕೊಲ್ಕತ್ತಾದಲ್ಲಿ ಕ್ರಮೇಣ ಬಿಗಡಾಯಿಸುತ್ತಿರುವ ಪರಿಸ್ಥಿತಿಯಿಂದಾಗಿ ಸಂಘಾಧ್ಯಕ್ಷರಾದ ವಿರಜಾನಂದರು ಶ್ರೀರಾಮಕೃಷ್ಣರ ಉತ್ಸವಕ್ಕೆ ಮೊದಲೇ ಶ್ಯಾಮಲಾತಾಲ್‌ಗೆ ಹೋಗಬೇಕಾಗಿತ್ತು. ಸ್ವಾಮೀಜಿ ಜಯಂತಿಯ ಕೆಲವು ದಿನಗಳ ನಂತರ ವಿರಜಾನಂದರು ಹೊಸ ಸಂನ್ಯಾಸಿ-ಬ್ರಹ್ಮಚಾರಿಗಳೊಂದಿಗೆ ಸುಮಾರು ಒಂದು ಗಂಟೆಯ ಕಾಲ ಮಾತನಾಡಿ ನಾನಾ ಉಪದೇಶಗಳನ್ನು ನೀಡಿದ್ದರು. ಮುಂದಿನ ಹಲವು ವರ್ಷಗಳೂ ಸಹ ವ್ರತಿಗಳ ಆಕಾಂಕ್ಷೆಯ ಮೇರೆಗೆ ಈ ಪದ್ಧತಿಯನ್ನು ಮುಂದು

---

೧ (ಇದು ಮೂಲ ಬಂಗಾಳಿ ಗ್ರಂಥದ ಹೆಸರು. ಕನ್ನಡದಲ್ಲಿ 'ಸ್ವಾಮಿ ವಿವೇಕಾನಂದರ ಸಂಭಾಷಣೆ' ಎಂಬ ಹೆಸರಿನಲ್ಲಿ ಪ್ರಕಟವಾಗಿದೆ. *(-ಅನು)*

ವರಿಸಿದ್ದರು. ಅವರ ಈ ಭಾಷಣಗಳು ತ್ಯಾಗ-ವೈರಾಗ್ಯ-ನಿಃಸ್ವಾರ್ಥ ಸೇವೆಯಲ್ಲಿ ನಮ್ಮನ್ನು ನಾವು ತೊಡಗಿಸಿಕೊಳ್ಳಲು ಬೇಕಾದ ಸ್ಫೂರ್ತಿ ಹಾಗೂ ಅದನ್ನು ಕಾರ್ಯರೂಪಕ್ಕೆ ತರಲು ಬೇಕಾದ ಸಲಹೆಗಳಿಂದ ತುಂಬಿತ್ತು.

೧೯೪೩ ಮಾರ್ಚ್‌ನ ಮಧ್ಯಭಾಗದಲ್ಲಿ ಡೆಹರಾಡೂನಿಗೆ ಹೋಗುವ ಮಾರ್ಗವಾಗಿ ಮಹಾರಾಜರು ಕಾಶಿಯಲ್ಲಿ ಮೂರು ದಿನ ನಿಂತು ಸುಮಾರು ೫೦ ದೀಕ್ಷಾರ್ಥಿಗಳಿಗೆ ದೀಕ್ಷೆ ನೀಡಿದ್ದರು. ಕೊಲ್ಕತ್ತೆಯ ಕೆಲವು ಸರ್ಕಾರಿ ಕಛೇರಿಗಳು ಯುದ್ಧದಿಂದಾಗಿ ಕಾಶಿಯಲ್ಲಿ ಬೀಡುಬಿಟ್ಟಿದ್ದವು. ಹೀಗೆಯೇ ಬಹಳಷ್ಟು ಕೊಲ್ಕತ್ತಾವಾಸಿಗಳು ಬಾಂಬು ದಾಳಿಯಿಂದಾಗಿ ತಾತ್ಕಾಲಿಕವಾಗಿ ಕಾಶಿಯಲ್ಲಿ ನೆಲೆಸಿದ್ದರು. ಹೀಗಾಗಿ ಕಾಶಿಯಲ್ಲಿ ಬಂಗಾಳಿಗಳ ಸಂಖ್ಯೆ ಬಹಳಷ್ಟೇ ವೃದ್ಧಿಸಿತ್ತು. ವಿರಜಾನಂದರು ಈ ಬಾರಿ ಇಳಿದುಕೊಂಡಿದ್ದ ಸೇವಾಶ್ರಮದ 'ಅಂಬಿಕಾಧಾಮ'ದ ಮುಂದಿನ ಮೈದಾನವು ದಿನವೂ ಸಂಜೆ ಭಕ್ತರಿಂದ ತುಂಬಿಹೋಗಿರುತ್ತಿತ್ತು.

೧೯೪೩ರ ಜೂನ್ ೧೮ರಂದು ವಿರಜಾನಂದರ ಎಪ್ಪತ್ತರ ಜನ್ಮದಿನ. ಮಹಾರಾಜರೀಗ ಶ್ಯಾಮಲಾತಾಲ್‌ನಲ್ಲಿದ್ದಾರೆ. ಈ ಸಂದರ್ಭದಲ್ಲಿ ಕೊಲ್ಕತ್ತಾ ಮತ್ತು ಬೇರೆ ಕಡೆಗಳಿಂದ ಬಹಳಷ್ಟು ಜನರು ಬಂದು ಅಲ್ಲಿ ನೆರೆದಿದ್ದಾರೆ. ಸ್ನಾನಾದಿಗಳನ್ನು ಮುಗಿಸಿ ಮಹಾರಾಜರು ತಾವಿದ್ದ ಬಂಗಲೆಯ ಕೆಳಮನೆಯಲ್ಲಿ ರಾಮಕೃಷ್ಣ-ಶಾರದಾದೇವಿ-ಸ್ವಾಮೀಜಿಯವರ ಪಟಗಳ ಸಮ್ಮುಖದಲ್ಲಿ ಹಾಸಿದ್ದ ವ್ಯಾಘ್ರಚರ್ಮಾಸನದಲ್ಲಿ ಧ್ಯಾನಕ್ಕೆ ಕುಳಿತಿದ್ದಾರೆ. ಮಿಕ್ಕ ಸಂನ್ಯಾಸಿಗಳೂ, ಭಕ್ತರೂ ಸಹ ಹಿಂದೆ ಕುಳಿತು ಧ್ಯಾನಕ್ಕೆ ತೊಡಗಿದ್ದರು. ಸ್ವಲ್ಪ ಹೊತ್ತಿಗೆ ಏಕಸ್ವರದಲ್ಲಿ 'ಭವಸಾಗರ-ತಾರಣ-ಕಾರಣ-ಹೇ...' ಎಂಬ ಹಾಡನ್ನು ಹೇಳಲಾಯಿತು. ನಂತರ ಸೇವಾಶ್ರಮದಲ್ಲಿ ಪಶುವಿಭಾಗದ ಹೊಸ ಕಟ್ಟಡವನ್ನು ಉದ್ಘಾಟಿಸಲು ಮಹಾರಾಜರು ಭಕ್ತರೊಡನೆ ಅಲ್ಲಿಗೆ ತೆರಳಿದರು. ಮತ್ತೆ ಕೊಠಡಿಗೆ ಹಿಂತಿರುಗಿ ಸಾಧು-ಬ್ರಹ್ಮಚಾರಿ-ಅತಿಥಿಗಳೊಡನೆ ಕುಳಿತು ಪ್ರಸಾದವನ್ನು ಸ್ವೀಕರಿಸಿದರು. ಸಂಜೆ ಭಜನೆ-ಕೀರ್ತನೆಗಳೊಂದಿಗೆ ಅಂದಿನ ಕಾರ್ಯಕ್ರಮಗಳು ಸಮಾರೋಪಗೊಂಡವು.

ಈ ಬಾರಿ ಮಠ ಮತ್ತು ಮಿಷನ್ನಿನ ಕಾರ್ಯದರ್ಶಿಗಳಾದ ಸ್ವಾಮಿ ಮಾಧವಾನಂದರು ಕೆಲವು ದಿನ ಮಾಯಾವತಿಯಲ್ಲಿ ಹಾಗೂ ಒಂದು ತಿಂಗಳು ಶ್ಯಾಮಲಾತಾಲ್‌ನಲ್ಲಿದ್ದು ಹೋಗಿದ್ದರು. ಶ್ಯಾಮಲಾತಾಲ್‌ನ ತೋಟದಲ್ಲಿ ಈ ವರ್ಷ ಒಳ್ಳೆಯ ಜಾತಿಯ ಮಾವು ಹೇರಳವಾಗಿ ಬಿಟ್ಟಿತ್ತು. ಒಮ್ಮೆಗೆ ಸುಮಾರು ಸಾವಿರ ಮಾವು ಹಣ್ಣಾಗಿಬಿಟ್ಟಿತ್ತು.[೨]

ಮಾಧವಾನಂದರು ಬಂದು ನೋಡುತ್ತಾರೆ, ವಿರಜಾನಂದರು ಊಟದ ಮನೆಯಲ್ಲಿ ಪ್ಯಾಕಿಂಗ್ ಬಾಕ್ಸ್‌ಗಳನ್ನು ಒಂದರ ಮೇಲೊಂದು ಜೋಡಿಸಿಟ್ಟು ದಿನವೂ ಅದರಲ್ಲಿ ಮಾವಿನ ಹಣ್ಣುಗಳನ್ನು ಜೋಡಿಸುವುದು ಮತ್ತು ಆರಿಸುವುದರಲ್ಲಿ ನಿರತರಾಗಿದ್ದಾರೆ. ಮಾಧವಾನಂದರನ್ನು ನೋಡಿ ನಗುತ್ತ, ''ನೋಡಪ್ಪ, ನನ್ನ ಸೇವಕರಿಗೆ ಈ ಕೆಲಸವನ್ನು ಒಪ್ಪಿಸಿದರೆ ಅವರು ಸ್ವಲ್ಪ ಮೆತ್ತಗಿರುವ ಹಣ್ಣನ್ನೂ ಸಹ ಕೊಳೆತಿದೆ ಎಂದು ಎಸೆದೇ ಬಿಡುವರು. ಅದಕ್ಕೆ ಚಹಾ ಕುಡಿದು ಬಂದು ನಾನೇ ಸ್ವತಃ ಆರಿಸಿಡುವೆ'' ಎಂದರು. ಮಾಧವಾನಂದರು ನಕ್ಕರು. ಅವರಿಗೆ ಮಾಯಾವತಿಯಲ್ಲಿ ವಿರಜಾನಂದರ ಮಿತವ್ಯಯದ ಪರಿಚಯ ಚೆನ್ನಾಗಿಯೇ ಆಗಿತ್ತು. ಯುವ ಭಕ್ತರೊಬ್ಬರು ಈ ಮಾವಿನ ಸಮಯದಲ್ಲಿ ಶ್ಯಾಮಲಾತಾಲ್‌ನಲ್ಲಿದ್ದರು. ಒಂದು ದಿನ, ಮಹಾರಾಜರು ಆಶ್ರಮದ ಎಲ್ಲ ಸಾಧು-ಅತಿಥಿಗಳಿಗೆ ಸ್ವಲ್ಪ ಚೆನ್ನಾಗಿರುವ ಹಣ್ಣುಗಳನ್ನು ಎತ್ತಿಟ್ಟು ತಮಗಾಗಿ ಅರ್ಧ ಕೊಳೆತ ಹಣ್ಣನ್ನು ತೆಗೆದಿಟ್ಟುಕೊಂಡದ್ದನ್ನು ಆ ಯುವ ಭಕ್ತನು ಕಂಡನು. ಇದರಿಂದ ಅವನ ಮನಸ್ಸಿಗೆ ತುಂಬ ನೋವಾಯಿತು. ವಿರಜಾನಂದರು ಅತ್ತ ಹೋಗುತ್ತಲೇ ಈ ಭಕ್ತನು ಅವರಿಗೆ ಗೊತ್ತಾಗದಂತೆ ಆ ಕೊಳೆತ ಹಣ್ಣನ್ನು ಬದಲಿಸಿ, ಅದರ ಸ್ಥಾನದಲ್ಲಿ ಚೆನ್ನಾಗಿರುವ ಮಾವನ್ನಿಟ್ಟು ಹೋದನು. ಒಂದು ಗಂಟೆ ಬಿಟ್ಟು ಬಂದು ನೋಡಿದರೆ ಮಹಾರಾಜರು ಅದಾವುದೋ ಕ್ಷಣದಲ್ಲಿ ಮತ್ತದನ್ನು ಸರಿಸಿ ಮತ್ತೊಂದು ಕೊಳೆತ ಹಣ್ಣನ್ನು ತಮ್ಮ ಪ್ಲೇಟಿನಲ್ಲಿರಿಸಿದ್ದಾರೆ! 'ಅಯ್ಯೋ ನಾನು ಮಹಾರಾಜರಿಗೊಂದು ಒಳ್ಳೆಯ ಮಾವನ್ನೂ ಸಹ ತಿನ್ನಿಸಲಾಗಲಿಲ್ಲವಲ್ಲ!' ಎಂದು ಭಕ್ತನು ತುಂಬ ಪರಿತಪಿಸಿದನು.

ಯಾರಿಗಾಗಿ ಈ ಪರಿತಾಪವೋ, ಅವರಾದರೋ ಎಲ್ಲರಿಂದ ತಿರಸ್ಕೃತವಾದ ವಸ್ತುಗಳನ್ನು ಉಪಯೋಗಿಸುವಲ್ಲಿ ಸ್ವಲ್ಪವಾದರೂ ಹಿಂಜರಿದದ್ದನ್ನು ಯಾರೂ ಕಂಡಿದ್ದಿಲ್ಲ. ಗುರುವಿನ ಬಗೆಗಿನ ಸ್ವಾಭಾವಿಕವಾದ ಶ್ರದ್ಧೆಯಿಂದಾಗಿ ನೂರಾರು ಭಕ್ತರು ಬಗೆಬಗೆಯ ವಸ್ತುಗಳನ್ನು ಮಹಾರಾಜರಿಗಾಗಿ ಕಳುಹಿಸುತ್ತಿದ್ದರು. ಆಗಲೂ ಮಹಾರಾಜರು, ''ವಸ್ತುಗಳು ಹೇರಳವಾಗಿದೆಯೆಂದು ಅದನ್ನು ಉಪಯೋಗಿಸಲೇಬೇಕೇನು?'' ಎನ್ನುತ್ತಿದ್ದರು. ಕರ್ಸಿಯಾಂಗ್‌ನಲ್ಲಿ ಇರುವಾಗ ಅವರ ಸೇವಕರಲ್ಲೊಬ್ಬರು ತರಕಾರಿ ಮುಂತಾದವುಗಳನ್ನು ಅನವಶ್ಯಕವಾಗಿ ವ್ಯಯಮಾಡುವುದನ್ನು ಕಂಡು, ''ನೀವಂತೂ ಶಶಿ ಮಹಾರಾಜರನ್ನು ನೋಡಿಲ್ಲ. ಠಾಕೂರರ ವಸ್ತುವಿನ ಕಿಂಚಿತ್ ಅಪವ್ಯಯವನ್ನೂ ಅವರು ಸಹಿಸುತ್ತಿರಲಿಲ್ಲ. ನಾವು ಅವರಿದ್ದಾಗ ಬಂದಿದ್ದೆವಲ್ಲ , ಆದ್ದರಿಂದ ಈ ರೀತಿ ಅಪವ್ಯಯಗಳು ನಮ್ಮ ಕಣ್ಣನ್ನು ಬಹಳ ಚುಚ್ಚುತ್ತವೆ'' ಎಂದಿದ್ದರು.

ವಿರಜಾನಂದರು ಶ್ಯಾಮಲಾತಾಲ್‌ನಲ್ಲಿದ್ದಾಗ, ಅವರ ಶಾರೀರಿಕ ಅಸ್ವಸ್ಥತೆಯಿಂದಾಗಿ ಡಾಕ್ಟರರು ವಿಶೇಷ ಪಥ್ಯವನ್ನೇನಾದರೂ ಸೂಚಿಸಿದರೆ ಅದನ್ನು ಲಕ್ನೌ ಅಥವಾ ಕೊಲ್ಕತ್ತೆಯಿಂದ ತರಿಸಬೇಕಾಗುತ್ತಿತ್ತು. ಅದಕ್ಕಾಗಿ ಕೆಲವೊಮ್ಮೆ ಭಕ್ತರಿಗೆ ಪತ್ರ ಬರೆದು ತಿಳಿಸುತ್ತಿದ್ದರು. ಏಕೆಂದರೆ ಭಕ್ತರು ಮಹಾರಾಜರ ಸೇವೆಗೆಂದು ಏನನ್ನಾದರೂ ಕಳುಹಿಸಲು ಯಾವಾಗಲೂ ಉತ್ಸುಕರಾಗಿರು

---

೨ ಕೆಲವು ವರ್ಷಗಳ ಕೆಳಗೆ ಬೂಢೋ ಬಾಬಾ (ಸ್ವಾಮಿ ಸಚ್ಚಿದಾನಂದರು) ಕೆಲವು ಹೂವಿನ ಹಾಗೂ ಈ ಮಾವಿನ ಸಸಿಗಳನ್ನು ಕಾಶಿಯಿಂದ ಕಳುಹಿಸಿದ್ದರು.

ತ್ತಿದ್ದರು. ಸೇವಕರು ಪಟ್ಟಿಯೊಂದನ್ನು ಸಿದ್ಧಪಡಿಸಿದರೆ ವಿರಜಾನಂದರು ಸ್ವತಃ ಅದನ್ನು ಕೂಲಂಕಷವಾಗಿ ಪರಿಶೀಲಿಸುತ್ತಿದ್ದರು. ಯಾವುದಾದರೂ ವಸ್ತುವನ್ನು ಅಗತ್ಯ ಪರಿಮಾಣಕ್ಕಿಂತ ಹೆಚ್ಚಾಗಿ ಬರೆದಿದ್ದಾರೆ ಎಂದೆನಿಸಿದರೆ ತಕ್ಷಣವೇ ಅದನ್ನು ಹೊಡೆದುಹಾಕಿ ಕಡಿಮೆ ಮಾಡಿ ಬರೆಯುತ್ತಿದ್ದರು. ''ಗೃಹಸ್ಥರದು ಕಷ್ಟದಿಂದ ಆರ್ಜಿತವಾದ ಹಣ, ಅವರು ಅದನ್ನು ಖುಷಿಯಿಂದಲೇ ನಮಗಾಗಿ ಖರ್ಚು ಮಾಡಲು ಬಯಸಿದರೂ, ಯಾರ ಮೇಲೂ ಹೆಚ್ಚಿನ ಒತ್ತಡ ಬೀಳದಂತೆ ನಾವು ನೋಡಿ ಕೊಳ್ಳುವುದು ಸೂಕ್ತ'' ಎಂದೆನ್ನುತ್ತಿದ್ದರು ಮಹಾರಾಜರು. ಹೀಗಾಗಿ, ಎಷ್ಟೋ ಬಾರಿ ೧೦-೧೨ ರೂಪಾಯಿ ಮೌಲ್ಯದ ವಸ್ತುಗಳನ್ನು ನಾಲ್ಕು ವ್ಯಕ್ತಿಗಳ ನಡುವೆ ಭಾಗ ಮಾಡಿ ತರಿಸಲಾಗುತ್ತಿತ್ತು.

ಗುರುದೇವರಿಗೆ ಒಳ್ಳೆಯ ಮಾವನ್ನು ತಿನ್ನಿಸಲಾಗಲಿಲ್ಲವೆಂದು ವ್ಯಥೆಪಟ್ಟಿದ್ದ ಭಕ್ತನಿಗೆ ಒಮ್ಮೆ ಮಹಾರಾಜರು, ''ಇಂತಹವರು ಶ್ಯಾಮಲಾತಾಲ್‌ಗೆ ಬರುತ್ತಿದ್ದಾರೆ, ಅವರೊಂದಿಗೆ ನೀನು ಕೆಲವು ತೆಂಗಿನಕಾಯಿಗಳನ್ನು ಕಳುಹಿಸು'' ಎಂದು ಬರೆದಿದ್ದರು. ಆದರೆ ಆ ವ್ಯಕ್ತಿಯು ಬರುವುದು ಕಾರಾಣಾಂತರಗಳಿಂದ ತಪ್ಪಿಹೋಯಿತು. ಆದ್ದರಿಂದ ಈ ಭಕ್ತನು ಎರಡೆರಡು ತೆಂಗಿನಕಾಯಿಗಳಂತೆ ಒಟ್ಟು ಎಂಟು ತೆಂಗಿನಕಾಯಿಗಳನ್ನು ಬೇರೆ ಬೇರೆಯಾಗಿ ಪಾರ್ಸೆಲ್ ಮಾಡಿದನು. ಮಹಾರಾಜರು ಅವನಿಗೆ, ''ಆರು ಆಣೆಯ ವಸ್ತುವನ್ನು ಎರಡು ರೂಪಾಯಿ ಖರ್ಚು ಮಾಡಿ ಕಳುಹಿಸಿರುವೆ. ಅದೂ ಒಮ್ಮೆಗೂ ಅಲ್ಲ, ನಾಲ್ಕು ಬಾರಿ! ತಿಳಿಗೇಡಿ, ನೀನೇನಾದರೂ ನನ್ನ ಮುಂದಿದ್ದರೆ ತೆಂಗಿನಕಾಯಿಗಳನ್ನು ನಿನ್ನ ತಲೆಯ ಮೇಲೆಯೇ ಒಡೆದುಬಿಡುತ್ತಿದ್ದೆ'' ಎಂದು ಬರೆದರು.

ಮತ್ತೊಬ್ಬ ಭಕ್ತನು ಒಮ್ಮೆ ವಿರಜಾನಂದರಿಗೆ ತಂಬಾಕು ಮತ್ತು ಒಂದು ಟಿನ್ ರಸಗುಲ್ಲ ಕಳುಹಿಸಿದ್ದನು. ಮಹಾರಾಜರು ಸಂತೋಷ ಗೊಂಡರಾದರೂ ''ಹೇಳದೇ-ಕೇಳದೇ ಆ ರೀತಿ ವಸ್ತುಗಳನ್ನು ಕಳುಹಿಸಬಾರದು'' ಎಂದು ತಿಳಿಸಿದರು. ಇದಾದ ನಂತರವೂ ಮತ್ತೊಮ್ಮೆ ಈ ಭಕ್ತನು ಬಹಳ ಖರ್ಚು ಮಾಡಿ ತಂಬಾಕು, ರಸ ಗುಲ್ಲ ಇನ್ನೂ ಹಲವಾರು ವಸ್ತುಗಳನ್ನು ಕಳುಹಿಸಿದನು. ಇದ ರಿಂದ ವಿರಜಾನಂದರು ಅಸಂತುಷ್ಟರಾಗಿ ಚೆನ್ನಾಗಿ ಬೈದು ಪತ್ರ ವೊಂದನ್ನು ಬರೆದಿದ್ದರು.

ಯಾರಾದರೂ ವಿರಜಾನಂದರ ಸೇವೆಗೆಂದು ದುಡ್ಡನ್ನು ಕಳುಹಿಸಿದರೆ, ಅದು ಆ ವ್ಯಕ್ತಿಯ ಆದಾಯದ ಮಿತಿಯೊಳಗಿದೆಯೇ ಹೇಗೆ ಎಂಬುದರ ಬಗ್ಗೆ ಗಮನವಿಡುತ್ತಿದ್ದರು. ಒಮ್ಮೆ ಭಕ್ತೆಯೊಬ್ಬಳು ಕೆಲವೊಂದು ತಿಂಗಳು ೨೫ ರೂಪಾಯಿಗಳನ್ನು ಕಳುಹಿಸಿದ ಬಳಿಕ ವಿರಜಾನಂದರು ವಿಚಾರಿಸಿದಾಗ, ಆಕೆಯ ಮಾಸಿಕ ಆದಾಯದಿಂದ ಅಷ್ಟೊಂದು ಹಣವನ್ನು ಉಳಿಸುವುದು ಅಸಾಧ್ಯ ಎಂಬುದು ತಿಳಿದು ಮಹಾರಾಜರು ಆಕೆಗೆ 'ತಿಂಗಳಿಗೆ ೩ ರೂ. ನಂತೆ ಕಳುಹಿಸು' ಎಂದು ಪತ್ರ ಬರೆದರು. ಮತ್ತೊಬ್ಬರು ಗುರುಸೇವೆಗೆಂದು ಪ್ರತಿ ತಿಂಗಳೂ ೪ ರೂ.ನಂತೆ ಕಳುಹಿಸುತ್ತಿದ್ದರು. ಮಧ್ಯದಲ್ಲಿ ಆತನಿಗೆ ಕೆಲಸ ಹೋಯಿತಾದರೂ ಮನಿಯಾರ್ಡರಿನಲ್ಲಿ ಯಥಾಕಾಲಕ್ಕೆ ಹಣ ಬಂದದ್ದನ್ನು ನೋಡಿ ವಿರಜಾನಂದರು ಸೇವಕರಿಗೆ, ''ಇನ್ನು ಅವನು ಹಣ ಕಳುಹಿಸುವುದು ಬೇಡ ಎಂದು ಬರೆ ನೋಡೋಣ'' ಎಂದು ಹೇಳಿದರು. ಆದರೆ ಅವರ ನಿಷೇಧವು ಯಾವ ಕೆಲಸಕ್ಕೂ ಬರಲಿಲ್ಲ ; ಮುಂದಿನ ತಿಂಗಳು ಮತ್ತೆ ಆತ ಹಣ ಕಳುಹಿಸಿದ. ಮಹಾರಾಜರು ಅವನಿಗೆ, ''ನೀನು ನನ್ನ ನಿಷೇಧವನ್ನು ಕೇಳಲಿಲ್ಲ, ಮುಂದಿನ ತಿಂಗಳೇನಾದರೂ ಹಣ ಕಳುಹಿಸಿದರೆ ನಾನದನ್ನು ಹಿಂತಿರುಗಿಸುವೆ'' ಎಂದು ಬರೆದರು. ***(ಮುಂದುವರಿಯುವುದು)***

**ಮುಖಪುಟದ ವಿವರಣೆ**

## ವೇದವ್ಯಾಸರು

ವೇದವ್ಯಾಸರು ಸನಾತನ ಧರ್ಮಕ್ಕೆ ನೀಡಿದ ಕೊಡುಗೆ ಅಪಾರವಾದದ್ದು. ವೇದಗಳನ್ನು ವಿಂಗಡಿಸಿ, ತಮ್ಮ ನಾಲ್ಕು ಮಂದಿ ಪ್ರಧಾನ ಶಿಷ್ಯಂದಿರಿಗೆ ಒಂದೊಂದು ವೇದವನ್ನು ಹೇಳಿಕೊಟ್ಟರು. ಈ ಮೂಲಕ ನಾಲ್ಕು ಶಾಖೆಗಳಲ್ಲಿ ಚತುರ್ವೇದಗಳು ಸುರಕ್ಷಿತವಾಗಿ ಮುಂದುವರಿಯುವಂತೆ ವ್ಯವಸ್ಥೆ ಮಾಡಿದರು. ಈ ಕಾರಣಕ್ಕೆ ಅವರಿಗೆ 'ವೇದವ್ಯಾಸ' ಎಂಬ ಹೆಸರು ಬಂತು.

ವೇದವ್ಯಾಸರು ಪ್ರಾತಃಸ್ಮರಣೀಯರು; ಸಾಕ್ಷಾತ್ ಬ್ರಹ್ಮಜ್ಞಾನಿಯಾಗಿದ್ದವರು. ಅವರನ್ನು 'ಗುರು' ವೆಂದು ಇಡೀ ಜಗತ್ತು ಗೌರವಿಸುತ್ತ ಬಂದಿದೆ. ವಿಶ್ವಮಾನ್ಯ ಮಹಾಕಾವ್ಯವಾದ 'ಮಹಾಭಾರತ'ದ ರಚನೆ, ಅದರಲ್ಲಿ ಬರುವ ಶ್ರೇಷ್ಠ ಆಧ್ಯಾತ್ಮಿಕ ಕೃತರತ್ನ ಭಗವದ್ಗೀತೆಯ ನಿರೂಪಣೆ, ಹದಿನೆಂಟು ಮಹಾಪುರಾಣಗಳ ಹಾಗೂ ಉಪಪುರಾಣಗಳ ರಚನೆ, 'ಬ್ರಹ್ಮಸೂತ್ರ'ಗಳ ರಚನೆಯ ಮೂಲಕ ಉಪನಿಷತ್ತುಗಳ ತಾರ್ಕಿಕ ಅರ್ಥಸಮನ್ವಯ — ಇವುಗಳ ಮೂಲಕ ಭಾರತೀಯ ಸಂಸ್ಕೃತಿಯ ತಿರುಳಾದ ಧಾರ್ಮಿಕ, ಆಧ್ಯಾತ್ಮಿಕ ಆದರ್ಶವನ್ನು ವೇದವ್ಯಾಸರು ಭದ್ರವಾದ ತಳಹದಿಯ ಮೇಲೆ ರೂಪಿಸಿದರು.

ಗುರುಪೂರ್ಣಿಮೆಯನ್ನು 'ವ್ಯಾಸಪೂರ್ಣಿಮೆ' ಎಂದೂ ಕರೆಯುತ್ತಾರೆ. ವ್ಯಾಸರ ಜನ್ಮದಿನವೂ ಇದೇ ದಿನ ಬರುತ್ತದೆ. ಆದ್ದರಿಂದ ಲೋಕಗುರುವಾದ ಈ ಮಹಾತ್ಮರ ಪೂಜೆಯನ್ನು ಎಲ್ಲೆಲ್ಲೂ ಆಚರಿಸಲಾಗುತ್ತಿದೆ. ವ್ಯಾಸರು 'ಮಹಾಭಾರತ'ವನ್ನು ನಿರಂತರ ಹೇಳಿದರೆಂದೂ, ಗಣೇಶನು ಅದನ್ನು ಸ್ವಲ್ಪವೂ ತಪ್ಪಿಲ್ಲದೆ ಬರೆದನೆಂದೂ ಪ್ರಸಿದ್ಧವಾದ ಕಥೆಯೊಂದಿದೆ. ಈ ಕಥೆಯನ್ನು ನಿರೂಪಿಸುವ ಮುಖಚಿತ್ರ ಈ ತಿಂಗಳ ಸಂಚಿಕೆಯಲ್ಲಿದೆ.